ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಅಕ್ಟೋಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 222 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629










# ಇಂದು ಹಾಸನಾಂಬ ಸಾರ್ವಜನಿಕ ದರ್ಶನಕ್ಕೆ ತೆರೆ

## ಬುಧವಾರ ಸಂಜೆ 7 ಗಂಟೆವರೆಗೆ ಅವಕಾಶ । ಗುರುವಾರ ಮಧ್ಯಾಹ್ನ ಗರ್ಭಗುಡಿ ಬಾಗಿಲು ಬಂದ್

• ಪ್ರಜೋದಯ ವರದಿ

**ಹಾಸನ:** ವರ್ಷಕ್ಕೊಮ್ಮೆ ಭಕ್ತರಿಗೆ ದರ್ಶನ ಭಾಗ್ಯ ಕರುಣಿಸುವ ಹಾಸನಾಂಬ ದೇವಿ ಸಾರ್ವಜನಿಕ ದರ್ಶನ ಮುಕ್ತಾಯಗೊಳ್ಳಲು ಕ್ಷಣಗಣನೆ ಆರಂಭವಾಗಿದೆ. ಬುಧವಾರ ಸಂಜೆ 7 ಗಂಟೆಗೆ ಭಕ್ತರ ದರ್ಶನಕ್ಕೆ ತೆರೆ ಬೀಳಲಿದ್ದು, ಗುರುವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಶಾಸ್ತ್ರೋಕ್ತವಾಗಿ ಮುಂದಿನ ವರ್ಷದವರೆಗೂ ಗರ್ಭಗುಡಿ ಬಾಗಿಲನ್ನು ಮುಚ್ಚಲಾಗುವುದು.

ಮಂಗಳವಾರ ಗಣ್ಯರ ದರ್ಶನಕ್ಕೆ ಶಿಷ್ಟಾಚಾರದ ವ್ಯವಸ್ಥೆ ರದ್ದುಗೊಳಿಸಿ ಸಾಮಾನ್ಯ ಭಕ್ತರ ದರ್ಶನಕ್ಕೆ ಅವಕಾಶ ನೀಡಿದ್ದರಿಂದ ಭಾರೀ ಸಂಖ್ಯೆಯ ಭಕ್ತರು ದರ್ಶನ ಪಡೆದು ಕೊಂಡರು. ಮುಂಜಾನೆಯಿಂದ ಬೆಳಿಗ್ಗೆ 7.30ರವರೆಗೂ ಅಷ್ಟಾಗಿ ಭಕ್ತರಿಲ್ಲದೆ ಸರದಿ ಸಾಲುಗಳು ಖಾಲಿಯಾಗಿದ್ದವು. ಆದರೆ, 7.30ರ ನಂತರ ಭಕ್ತರ ಸಂಖ್ಯೆಯಲ್ಲಿ ದಿಢೀರ್ ಏರಿಕೆಯಾಗಿ ಧರ್ಮ ದರ್ಶನದ ಸಾಲು, 1000, 300 ರೂ. ವಿಶೇಷ ದರ್ಶನದ ಸಾಲಿನಲ್ಲೂ ಜನಜಂಗುಳಿ ಉಂಟಾಯಿತು. ಅಮಾವಾಸ್ಯೆ ಹಿನ್ನಲೆ ಸಾಗೋರಾಪಾದಿಯಲ್ಲಿ ಭಕ್ತರು ಆಗಮಿಸಿದರು. ಮಧ್ಯಾಹ್ನದ



ನಂತರ 1000ರೂ., 300ರೂ. ವಿಶೇಷ ದರ್ಶನದ ಸಾಲುಗಳಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗಿತ್ತು. ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ದೇವಸ್ಥಾನದ ಆಡಳಿತಾಧಿಕಾರಿ ಮಾರುತಿ ಅವರು ಸ್ಥಳದಲ್ಲೇ ಇದ್ದು ನಿರ್ವಹಣೆ ನೋಡಿಕೊಂಡರು.

ಶಿಷ್ಟಾಚಾರದ ವ್ಯವಸ್ಥೆ ರದ್ದುಗೊಳಿಸಿದ್ದರಿಂದ ಮಾಜಿ ಸಚಿವ ಪುಟ್ಟರಂಗಶೆಟ್ಟಿ, ಚಿತ್ರನಟರಾದ ಹರ್ಷಿಕಾ ಪೂಣಚ್ಚ, ಭುವನ್ ದಂಪತಿ 1000ರೂ. ಟಿಕೆಟ್ ಪಡೆದು ದರ್ಶನಕ್ಕೆ ಆಗಮಿಸಿದರು. ನಂಜಾವಧೂತ ಸ್ವಾಮೀಜಿ ಅವರನ್ನು ಮುಖ್ಯಪ್ರವೇಶ ದ್ವಾರದಲ್ಲಿ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡದೆ ಇದ್ದರಿಂದ ಅಸಮಾಧಾನಗೊಂಡು ವಾಪಾಸ್ ಹೋಗಿದ್ದರು. ಪುನಃ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಕರೆ ಮಾಡಿ, ದರ್ಶನಕ್ಕೆ ಅವಕಾಶ ಮಾಡಿಕೊಟ್ಟರು. ಭಕ್ತರಿಗೆ ಸಿದ್ದೇಶ್ವರ ಸ್ವಾಮಿ ದರ್ಶನಕ್ಕೆ ಅವಕಾಶ ಮಾಡಿಕೊಡದಿರುವುದಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಇಂದು ಸಿದ್ದೇಶ್ವರಸ್ವಾಮಿ ಜಾತ್ರೆ

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ದರ್ಶನ ವ್ಯವಸ್ಥೆ ಬಗ್ಗೆ ವಿಡಿಯೋ ಮೂಲಕ ಮಾಹಿತಿ ನೀಡಿ, ಸೋಮವಾರ ಮುಂಜಾನೆಯಿಂದ ಮಂಗಳವಾರ ಮುಂಜಾನೆವರೆಗೆ ಒಟ್ಟು 2 ಲಕ್ಷ ಜನರು ಸುಗಮವಾಗಿ ದೇವಿಯ ದರ್ಶನ ಪಡೆದುಕೊಂಡಿದ್ದಾರೆ. ಮಂಗಳವಾರ ಮಧ್ಯರಾತ್ರಿ 12 ಗಂಟೆ ದರ್ಶನ ಮುಕ್ತಾಯಗೊಂಡು ಬುಧವಾರ ಮುಂಜಾನೆ 5 ಗಂಟೆಗೆ ದರ್ಶನ ಪ್ರಾರಂಭವಾಗಿ ಸಂಜೆ 7 ಗಂಟೆವರೆಗೂ ನಿರಂತರ ದರ್ಶನ ಇರುತ್ತದೆ ಎಂದು ತಿಳಿಸಿದ್ದಾರೆ. ಬುಧವಾರ ಸಂಜೆ 7 ಗಂಟೆಗೆ ಸಾರ್ವಜನಿಕರ ದರ್ಶನ ಮುಕ್ತಾಯಗೊಂಡ ನಂತರ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ. ಈ ವೇಳೆ ಕೆಂಡೋತ್ಸವ, ರಥೋತ್ಸವ ಇರುತ್ತದೆ. ಗುರುವಾರ ಸಾರ್ವಜನಿಕರಿಗೆ ದರ್ಶನ ಇರುವುದಿಲ್ಲ. ಪೂಜೆ ನಂತರ ಮುಂದಿನ ವರ್ಷದ ವರೆಗೂ ಹಾಸನಾಂಬ ದೇಗುಲದ ಬಾಗಿಲು ಮುಚ್ಚಲಾಗುತ್ತದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಬುಧವಾರ ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ನಿರಂತರ ಸಾರ್ವಜನಿಕ ದರ್ಶನ ಇರುತ್ತದೆ. 7 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಗರ್ಭಗುಡಿ ಬಾಗಿಲು ಮುಚ್ಚಲಾಗುತ್ತದೆ. 12 ಗಂಟೆ ನಂತರ ಗುರುವಾರ ಬೆಳಿಗ್ಗೆ 5 ಗಂಟೆಯವರೆಗೆ ದೇವಾಲಯದ ಸುತ್ತಲೂ ಇರುವವರಿಗೆ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಬೆಳಿಗ್ಗೆ 5 ಗಂಟೆಯಿಂದ ದರ್ಶನ ಇರುವುದಿಲ್ಲ.
-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ



### 3.40 ಲಕ್ಷ ಭಕ್ತರಿಂದ ವಿಶೇಷ ದರ್ಶನ

ಸಾರ್ವಜನಿಕ ದರ್ಶನ ಪ್ರಾರಂಭವಾದ ದಿನದಿಂದ ಈವರೆಗೆ 1,000, 300ರೂ. ವಿಶೇಷ ದರ್ಶನದ ಟಿಕೆಟ್‌ನಲ್ಲಿ 3,40,260 ಜನರು ದರ್ಶನ ಪಡೆದುಕೊಂಡಿದ್ದಾರೆ. ಕಳೆದ ವರ್ಷ ಇಡೀ ದರ್ಶನೋತ್ಸವದಲ್ಲಿ ಒಟ್ಟು 1,29,956 ಜನರು ಟಿಕೆಟ್ ಪಡೆದು ಕೊಂಡಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ, ಮೂರುಪಟ್ಟ ಹೆಚ್ಚು ಜನರು ವಿಶೇಷ ದರ್ಶನ ಪಡೆದುಕೊಂಡಿದ್ದಾರೆಂದು ಸಚಿವ ಕೃಷ್ಣಬೈರೇಗೌಡ ಅವರು ಮಾಹಿತಿ ನೀಡಿದ್ದಾರೆ.


# ಕೊಂಚ ಬಿಡುವು ನೀಡಿದ ವರುಣ

## ಆಲೂರಿನಲ್ಲಿ ಸಂಪರ್ಕ ಸೇತುವೆ ಕುಸಿತ । ಕೆರೆಯಂತಾದ ಅರಸೀಕೆರೆ ಬಸ್ ನಿಲ್ದಾಣ

• ಪ್ರಜೋದಯ ವರದಿ

**ಹಾಸನ:** ಕಳೆದ ಮೂರು ದಿನಗಳಿಂದ ಜೋರಾಗಿದ್ದ ವರುಣಾರ್ಭಟ ಮಂಗಳವಾರ ಕೊಂಚ ಬಿಡುವು ನೀಡಿದ್ದು, ಇಡೀ ದಿನ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿತ್ತು.

ಸೋಮವಾರ ರಾತ್ರಿ, ಅರಸೀಕೆರೆ, ಸಕಲೇಶಪುರ, ಅರಕಲಗೂಡು ವ್ಯಾಪ್ತಿಯಲ್ಲಿ ಧಾರಾಕಾರ ಮಳೆಗೆ ನಷ್ಟವುಂಟಾಗಿದೆ. ಬಹುತೇಕ ರಸ್ತೆಗಳು ಜಲಾವೃತವಾಗಿದ್ದು, ಕೆರೆ-ಕಟ್ಟೆಗಳು ಭರ್ತಿಯಾಗಿ ಕೋಡಿ ಬಿದ್ದಿವೆ. ಅರಸೀಕೆರೆಯಲ್ಲಿ ಸುರಿದ ಮಳೆಗೆ ಬಸ್ ನಿಲ್ದಾಣ ಕೆರೆಯಂತೆ ಭಾಸವಾಯಿತು. ಪ್ರಯಾಣಿಕರು ಬಸ್ ಹತ್ತಲು ಹರಸಾಹಸಪಟ್ಟರು. ಚನ್ನರಾಯಪಟ್ಟಣ ತಾಲ್ಲೂಕಿನ ಮಲ್ಲಾಘಟ್ಟ ಕೆರೆ ತುಂಬಿ ಹರಿಯುತ್ತಿದ್ದು, ಪ್ರವಾಸಿಗರ ತಾಣವಾಗಿ ಮಾರ್ಪಟ್ಟಿದೆ. ನಾಯಕ ಜಗ್ಗೇಶ್ ಅವರ ಮನ್ಮಥ ಸಿನಿಮಾ ಚಿತ್ರೀಕರಣವಾಗಿರುವ ಸ್ಥಳ ಇದಾಗಿದ್ದು ಕೆರೆ ಭರ್ತಿಯಾಗಿರುವ ಹಿನ್ನಲೆ



ಸೊಬಗು ಹೆಚ್ಚಿದೆ. ಚನ್ನರಾಯಪಟ್ಟಣ, ತಿಪಟೂರು, ತುರುವೆಕೆರೆ, ಅಮಸಂದ್ರ, ಹಾಗು ಬೆಳ್ಳೂರಿನಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಜಲಧಾರೆ ಕಣ್ತುಂಬಿಕೊಂಡರು.

**ಸಕಲೇಶಪುರದಲ್ಲಿ ರಣ ಮಳೆ**

ಸೋಮವಾರ ರಾತ್ರಿ ಸಕಲೇಶಪುರದಲ್ಲಿ ಧಾರಾಕಾರ ಮಳೆಗೆ ಕಾಫಿ ಫಸಲು ನಾಶವಾಗಿದೆ. ಅರೇಬಿಕಾ ಕಾಫಿ ಕೊಯ್ಲು ಸಂದರ್ಭದಲ್ಲೇ ಮಳೆ ಸುರಿದಿದ್ದು, ಆಘಾತ ತರಿಸಿದೆ. ಕಾಫಿ

» ನಾಲ್ಕನೇ ಪುಟದಲ್ಲಿ

# 23 ಲಕ್ಷ ಭಕ್ತರ ಆಗಮನ : 20 ಕೋ.ರೂ. ಆದಾಯ

## ಇತಿಹಾಸದಲ್ಲೇ ಮೊದಲ ಬಾರಿ ಅತೀ ಹೆಚ್ಚಿನ ಭಕ್ತರಿಂದ ಹಾಸನಾಂಬ ದರ್ಶನ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನೋತ್ಸವಕ್ಕೆ ಭಕ್ತ ಸಾಗರವೇ ಹರಿದು ಬರುತ್ತಿದೆ. ಅ.10ರಿಂದ ಸೋಮವಾರದವರೆಗೆ ಒಟ್ಟು 23 ಲಕ್ಷಕ್ಕೂ ಹೆಚ್ಚು ಭಕ್ತರು ಭೇಟಿ ನೀಡುವ ಮೂಲಕ ಈ ಬಾರಿ ಹೊಸ ದಾಖಲೆ ಬರೆದಿದ್ದಾರೆ.

ಅ.10ರಿಂದ ಹಾಸನಾಂಬೆ ದೇವಿ ದರ್ಶನ ಪ್ರಾರಂಭವಾದಾಗಿನಿಂದ ಸೋಮವಾರ (ಅ.20)ರವರೆಗೂ 11 ದಿನಗಳಲ್ಲಿ ಒಟ್ಟು 23 ಲಕ್ಷಕ್ಕೂ ಅಧಿಕ ಭಕ್ತರು ದೇವಿ ದರ್ಶನ ಪಡೆದು ಕೊಂಡಿದ್ದಾರೆ. ಇತಿಹಾಸದಲ್ಲೇ ಮೊದಲ ಬಾರಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದಾರೆ.

ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು, 1000, 300 ರೂ. ಲಾಡು ಪ್ರಸಾದ ಮಾರಾಟದಿಂದ 20 ಕೋ. ರೂ. ಆದಾಯ ಬಂದಿದ್ದು, ಮಂಗಳವಾರ ಬೆಳಿಗ್ಗೆಯಿಂದ ಭಕ್ತರ ಸಂಖ್ಯೆ ಕಡಿಮೆ ಇತ್ತು. ಮಧ್ಯಾಹ್ನದವರೆಗೆ 68 ಸಾವಿರಕ್ಕೂ ಹೆಚ್ಚು ಭಕ್ತರು ದೇವಿ ದರ್ಶನ ಪಡೆದಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆ ಯಲ್ಲಿ ಬರುತ್ತಿದ್ದರಿಂದ ಸೋಮವಾರ ವೇ ಶಿಷ್ಟಾಚಾರ ಬಂದ್ ಮಾಡಿದ್ದೇವೆ. ಶಿಷ್ಟಾಚಾರ ಮುಗಿದ ಮೇಲೂ ಕೆಲವು ಗಣ್ಯರು, ಸ್ವಾಮೀಜಿಗಳು ಬರುತ್ತಿದ್ದಾರೆ. ಅವರನ್ನು ಪಾಸ್, ಸಾವಿರ ರೂ. ಟಿಕೆಟ್ ಮೂಲಕ ಕರೆತಂದು ದೇವಿ ದರ್ಶನ ಮಾಡಿಸುತ್ತಿದ್ದೇವೆ ಎಂದರು. ಇಡೀ ಜಾತ್ರಾ ಮಹೋತ್ಸವ ಯಶಸ್ವಿಯಾಗಿ ನಡೆಯುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನ ದಲ್ಲಿ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ಕಾರ್ಮಿಕರು ದುಡಿದಿದ್ದರಿಂದ ಹಾಸನಾಂಬ ಜಾತ್ರಾ ಮಹೋತ್ಸವ ಗೊಂದಲವಿಲ್ಲದೆ ನಡೆದಿದೆ ಎಂದು ತಿಳಿಸಿದರು.













# ಮಳೆ ನಡುವೆಯೂ ದೀಪಾವಳಿ ಖರೀದಿ ಭರಾಟೆ

## ಪಟಾಕಿ ಮಳಿಗೆಗಳಲ್ಲಿ ಜನದಟ್ಟಣೆ | ಬೆಳಕಿನ ಹಬ್ಬಕ್ಕೆ ಭರದ ಸಿದ್ಧತೆ

• ಪ್ರಜೋದಯ ವರದಿ

**ಹಾಸನ:** ಬೆಳಕಿನ ಹಬ್ಬ ದೀಪಾವಳಿಗೆ ನಗರ ಸೇರಿ ಜಿಲ್ಲಾದ್ಯಂತ ಸಿದ್ಧತೆ ಜೋರಾಗಿದ್ದು ಮಳೆ ನಡುವೆಯೂ ಪೂಜಾ ಸಾಮಾಗ್ರಿ, ಹಾಗು ಪಟಾಕಿ ಖರೀದಿಗೆ ಜನರು ಮುಗಿಬಿದ್ದರು.

ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ನಡುವೆ ದೀಪಾವಳಿ ಸಂಭ್ರಮವು ನಗರದ ಜನರನ್ನು ಸದಾ ಸಂಭ್ರಮಾಚರಣೆಯಲ್ಲಿ ತೊಡಗುವಂತೆ ಮಾಡಿದೆ. ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿರುವ ನಡುವೆಯೂ ವರುಣ ಬಿಡುವು ನೀಡಿದ ಸಮಯದಲ್ಲಿ ಮಾರುಕಟ್ಟೆಗೆ ಜನರು ಲಗ್ಗೆಯಿಡುತ್ತಿದ್ದಾರೆ. ಬಟ್ಟೆ ಅಂಗಡಿ, ವಾಹನ ಶೋ ರೂಂ, ಆಭರಣ ಮಳಿಗೆ, ಉಡುಗೊರೆ ಅಂಗಡಿಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಕಂಡುಬಂತು.

ವ್ಯಾಪಾರಿಗಳು ಅಂಗಡಿ ಮುಂಗಟ್ಟು ಸ್ವಚ್ಛಗೊಳಿಸಿ ಅಲಂಕಾರಗೊಳಿಸಿದ್ದಾರೆ. ಕೆಲವು ಅಂಗಡಿ-ಮಳಿಗೆಗಳಲ್ಲಿ ಪೂಜೆ ಸಲ್ಲಿಸಲಾಗಿದೆ. ಗ್ರಾಹಕರನ್ನು ಸೆಳೆಯಲು ವರ್ತಕರು ವಿವಿಧ ರೀತಿಯ ಆಫರ್‌ಗಳನ್ನು ಘೋಷಿಸಿದ್ದಾರೆ. ರಸ್ತೆಗಳಲ್ಲಿ ಸಂಜೆ ವೇಳೆ ಸಂಚಾರ ದಟ್ಟಣೆ ಉಂಟಾಗುತ್ತಿದೆ. ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಜನರು ಓಡಾಡುವುದು ಕಷ್ಟ ಸಾಧ್ಯವಾಗಿದೆ.

**ಮಣ್ಣಿನ ಹಣತೆ ಮಾರಾಟ**

ದೀಪಾವಳಿ ಪ್ರತಿನಿಧಿಸುವ ಮಣ್ಣಿನ ಹಣತೆಗಳ ಮಾರಾಟಕ್ಕಾಗಿ ನಗರದಲ್ಲಿ ರಸ್ತೆ ಬದಿ ಮಳಿಗೆಗಳು ಸಿದ್ಧವಾಗಿವೆ. ಪುಟ್ಟ ಸಾಂಪ್ರದಾಯಿಕ ತರಹೇವಾರಿ ಬಣ್ಣ, ವಿನ್ಯಾಸದ ದೀಪಗಳು ಆಕರ್ಷಿಸುತ್ತಿವೆ. ಮನೆಗಳು, ಅಂಗಡಿಗಳ ಎದುರು ಅಳವಡಿಸಲಾಗುವ ಆಕಾಶ ಬುಟ್ಟಿಗಳು ಎಲ್ಲೆಡೆ ರಾರಾಜಿಸುತ್ತಿವೆ. ಬಣ್ಣ ಬಣ್ಣದ ರಂಗೋಲಿ, ಅಲಂಕಾರಿಕ ವಸ್ತುಗಳು, ಪಟಾಕಿಗಳು ಸೇರಿ ಹಬ್ಬಕ್ಕಾಗಿ ಮಾರುಕಟ್ಟೆಯಲ್ಲಿ ಶೃಂಗಾರಗೊಂಡಿದೆ.



**ಪೂಜಾ ಸಾಮಾಗ್ರಿ, ಖರೀದಿ ಜೋರು**

ಹಬ್ಬದ ಹಿನ್ನಲೆ ಹೂವು ಹಣ್ಣು ಖರೀದಿ ಜೋರಾಗಿದೆ. ನಗರದ ಕಟ್ಟಿನಕೆರೆ ಮಾರುಕಟ್ಟೆ, ಮಹಾವೀರ ವೃತ್ತ, ಡೇರಿ ವೃತ್ತ ಸೇರಿ ವಿವಿಧೆಡೆ ವ್ಯಾಪಾರ ಜೋರಾಗಿ ನಡೆಯಿತು. ರಸ್ತೆ ಬದಿಯಲ್ಲಿ ಹೂವು-ಹಣ್ಣು, ಬಾಳೆ ಕಂದು, ಮಾವಿನ ಎಲೆ ಮಾರಾಟ ಮಾಡಲಾಗುತ್ತಿದೆ. ಸೇವಂತಿಗೆ ಒಂದು ಮಾರಿಗೆ 50 ರೂ. ನಂತೆ ಮಾರಾಟ ಮಾಡಲಾಯಿತು. ಚೆಂಡು ಹೂ ಒಂದು ಮಾರಿಗೆ 70 ರೂ. ಹಾಗು ಗುಡ್ಡೆ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತಿದೆ. ಬಾಳೆ ಕಂದು ಜೋಡಿ 40 ರೂ., ಸೇಬು ಕೆ.ಜಿ.ಗೆ 150 ರೂ., ದಾಳಿಂಬೆ 100 ರೂ. ಮೂಸಂಬಿ ಕೆ.ಜಿ. 50 ರೂ., ಬಾಳೆ ಹಣ್ಣು ಕೆ.ಜಿ. 80 ರೂ. ನಂತೆ ದೊರೆಯಿತು. ಮಾರುಕಟ್ಟೆಯಲ್ಲಿ ಸಗಣಿಯೂ ಮಾರಾಟಕ್ಕೆ ಲಭ್ಯ ವಿತ್ತು. ಪ್ರತಿ ಉಂಡೆಗೆ 10 ರೂ.ನಂತೆ ಸಗಣಿಯನ್ನು ಮಹಿಳೆಯರು ಮಾರಾಟ ಮಾಡಿದರು.

**ಪಟಾಕಿ ವ್ಯಾಪಾರ ಬಲು ಜೋರು**

ಮಳೆ ನಡುವೆಯೂ ಪಟಾಕಿ ಖರೀದಿಗೆ ಗ್ರಾಹಕರು ಮುಗಿಬಿದ್ದರು. ನಗರದ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ 55 ಮಳಿಗೆ ಹಾಕಲಾಗಿದೆ. ಅದೇ ರೀತಿ ದೊಡ್ಡಕೊಂಡಗೊಳದ ಗೋದಾಮಿನಲ್ಲಿ ಪಟಾಕಿ ವ್ಯಾಪಾರ ಜೋರಾಗಿತ್ತು. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಪಟಾಕಿ ಮಳಿಗೆ ಹಾಕಲಾಗುತ್ತಿತ್ತು. ಈ ಬಾರಿ ಎಸ್.ಎಂ.ಕೃಷ್ಣ ಬಡಾವಣೆಗೆ ಸ್ಥಳಾಂತರಿಸಲಾಗಿದೆ. ಪಟಾಕಿ ಮಾರಾಟ ಮಳಿಗೆ ಜಾಗ ಮಳೆಯಿಂದ ಕೆಸರು ಗದ್ದೆಯಂತಾಗಿದೆ. ಗ್ರಾಹಕರು ತಿರುಗಾಡಲು ಸಾಧ್ಯವಾಗದಂತಹ ಪರಿಸ್ಥಿತಿಯಿದೆ. ಸುರ್‌ಸುರ್ ಪಟಾಕಿ, ಏರ್‌ಗನ್, ಅಟೋಬಾಂಬ್, ಚಕ್ರ, ಕೃಷ್ಣ ಚಕ್ರ, ಭೂ ಚಕ್ರ, ಪೆನ್ಸಿಲ್, ಹಾವಿನ ಮಾತ್ರೆ, ರಾಕೆಟ್, ಲಕ್ಷ್ಮಿ ಬಾಂಬ್, ಹೂವಿನ ಕುಂಡ, ಸರ ಪಟಾಕಿ ಹೀಗೆ ನಾನಾ ಬಗೆಯ ಪಟಾಕಿಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದವು.



**ಹಸಿರು ಪಟಾಕಿ ಮಾಯ**

ದೀಪಾವಳಿ ಹಬ್ಬದಲ್ಲಿ ಹಸಿರು ಪಟಾಕಿಗೆ ಆದ್ಯತೆ ನೀಡಬೇಕೆಂದು ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದೆಯಾದರೂ ಜಿಲ್ಲೆಯಲ್ಲಿ ನಿಯಮ ಪಾಲನೆಯಾಗುತ್ತಿಲ್ಲ. ದೊಡ್ಡಕೊಂಡ ಗೊಳದ ಗೋದಾಮಿನಲ್ಲಿ ಪಟಾಕಿ ಮಾರಾಟವಲ್ಲದೆ ಬೇರೆ ಜಿಲ್ಲೆಗಳಿಗೆ ಅಲ್ಲಿಂದಲೇ ಪೂರೈಕೆ ಯಾಗುತ್ತಿದೆ. ಎರಡು ತಿಂಗಳ ಹಿಂದೆಯೇ ಪಟಾಕಿ ಸಂಗ್ರಹಿಸಡಲಾಗಿತ್ತು. ಲಾರಿಗಳಲ್ಲಿ ಲೋಡ್‌ಗಟ್ಟಲೇ ಪಟಾಕಿ ಸಾಗಣೆಯಾಗುತ್ತಿದೆ.

# ಹುತಾತ್ಮ ಪೊಲೀಸರ ತ್ಯಾಗ ಸದಾ ಸ್ಮರಣೀಯ

• ಪ್ರಜೋದಯ ವರದಿ

**ಹಾಸನ:** ಸಮಾಜದ ರಕ್ಷಣೆಗಾಗಿ ವೈಯಕ್ತಿಕ ಬದುಕು ಮರೆತು ನಿಲ್ಲುವ ಹಾಗು ಪ್ರಾಣ ತ್ಯಾಗ ಮಾಡಿರುವ ಪೊಲೀಸರ ಸೇವೆಗೆ ಎಷ್ಟು ಗೌರವ ಸಲ್ಲಿಸಿದರೂ ಕಡಿಮೆಯೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮಂಗಳವಾರ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಸ್ಮಾರಕಕ್ಕೆ ಗೌರವ ಸಲ್ಲಿಸಿ ಮಾತನಾಡಿದ ಅವರು, ಒಂದು ವರ್ಷದಲ್ಲಿ ದೇಶದಾದ್ಯಂತ 191 ಪೊಲೀಸ್ ಅಧಿಕಾರಿ ಹಾಗು ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಅವರ ಕುಟುಂಬಗಳು ಅನುಭವಿಸುತ್ತಿರುವ ನೋವು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿಯೆಂದರು.

ಸೇವೆ ಸಲ್ಲಿಸುವಾಗ ಹುತಾತ್ಮರಾದ ಪೊಲೀಸರ ಸ್ಮರಣಾರ್ಥ ಪ್ರತಿವರ್ಷ ಅ.21 ರಂದು ಈ ದಿನಾಚರಣೆ ಆಚರಿಸಲಾಗುತ್ತದೆ. ಪೊಲೀಸರು ನಮ್ಮನ್ನು ಕಾಪಾಡುವವರು. ಆದರೆ, ಅವರ ಭದ್ರತೆಯ ಬಗ್ಗೆ ಹಲವು ಪ್ರಶ್ನೆ ಎದುರಾಗುತ್ತದೆ. ಅವರು 24 ಗಂಟೆ ಕರ್ತ ವ್ಯದಲ್ಲಿರುತ್ತಾರೆ. ಅವರ ಸೇವಾ ಭದ್ರತೆಗೂ ಸರ್ಕಾರ ಹೆಚ್ಚಿನ ಗಮನ ಹರಿಸಬೇಕೆಂದರು.



ಜಿಲ್ಲಾಧಿಕಾ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಪೊಲೀಸರ ಸೇವೆ ಸಮಾಜದ ಜೀವನಾಡಿಯಾಗಿದ್ದು, ಅವರು ಸದಾ ದೃಢತೆ ಕಾಪಾಡಿಕೊಂಡು ತಮ್ಮ ಕರ್ತವ್ಯ ನಿಭಾಯಿಸ ಬೇಕು. ನಾವು ಅವರ ಸೇವೆಗೆ ಯಾವಾಗಲೂ ಕೃತಜ್ಞರಾಗಿರಬೇಕು. ಸಮಾಜದಲ್ಲಿ ಶಾಂತಿ- ಸುವ್ಯವಸ್ಥೆ ಕಾಪಾಡು ವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರ ಸೇವೆ ಇಲ್ಲದಿದ್ದರೆ ಸಮಾಜವೇ ಅಸ್ಥಿರವಾಗುತ್ತದೆ ಎಂದರು.

ಪೊಲೀಸರು ನಮ್ಮ ರಕ್ಷಕರಾಗಿದ್ದು, ಅವರು ಮಾಡುವ ಸೇವೆ ಅಮೂಲ್ಯವಾದುದು, ಯಾವ ಸಂದರ್ಭದಲ್ಲಿಯೂ ಪೊಲೀಸ್ ಅಧಿಕಾರಿ ಹಾಗು ಸಿಬ್ಬಂದಿ ಮಾನಸಿಕವಾಗಿ ಅಥವಾ ದೈಹಿಕ ವಾಗಿ ಕುಗ್ಗಬಾರದು. ಕರ್ತವ್ಯದಲ್ಲಿ ಪೊಲೀಸರು ವೈಯಕ್ತಿಕ ಜೀವನವನ್ನೇ ತ್ಯಾಗ ಮಾಡುತ್ತಾರೆ. ಅವರು ಕ್ಷಣಮಾತ್ರ ಸುಮ್ಮನಾದರೆ ಪರಿಸ್ಥಿತಿ ಹೇಗಿರುತ್ತ ದೆಂಬುದನ್ನು ಊಹಿಸಲು ಸಾಧ್ಯವೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಮಾತನಾಡಿ, ಕರ್ತವ್ಯ ನಿಷ್ಠೆಯಿಂದ ಪ್ರಾಣ ತ್ಯಾಗ ಮಾಡಿದ ಹುತಾತ್ಮರಿಗೆ ಪ್ರತಿ ವರ್ಷ ಈ ದಿನ ಗೌರವ ಸಲ್ಲಿಸಲಾಗುತ್ತದೆ. ಇದು ಅವರ ತ್ಯಾಗಕ್ಕೆ ನಮನಗಳು ಎಂದು ಹೇಳಿದರು.

ಮೂರು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ಹುತಾತ್ಮರ ಪಟ್ಟಿ ಓದಿದ ಬಳಿಕ ಪೊಲೀಸ್ ಧ್ವಜವನ್ನು ಅರ್ಧಕ್ಕೆ ಇಳಿಸಿ ಮೌನಾಚರಣೆ ನಡೆಸಲಾಯಿತು. ಅಪರ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಇಲಾಖೆಯ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

## ಕಾರು ಡಿಕ್ಕಿ: ಯುವಕ ಸಾವು ಮತ್ತೊಬ್ಬನಿಗೆ ಗಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬೈಕ್ ಮತ್ತು ಮಾರುತಿ ಸುಜುಕಿ ಬಲೆನೋ ಕಾರು ನಡುವೆ ಅಪಘಾತ ಸಂಭವಿಸಿ ಯುವಕ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹಿರೀಸಾವೆಯಲ್ಲಿ ಮಂಗಳವಾರ ನಡೆದಿದೆ.

ಹಿರೀಸಾವೆ ಗ್ರಾಮದ ಅಮ್ಮ ಕುಟೀರ ಬಡಾವಣೆಯ ಮಟನ್ ಬಾಬು ಎಂಬುವವರ ಪುತ್ರ ಇಸ್ಮಾಯಿಲ್ (22) ಮೃತ. ಮುನ್ನಾ ಎಂಬುವವರ ಪುತ್ರ ಸಲ್ಮಾನ್ ಗಾಯ ಗೊಂಡಿದ್ದು, ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರು ಯುವಕರು ಅಣ್ಣ-ತಮ್ಮಂದಿರ ಮಕ್ಕಳಾಗಿದ್ದು, ಹಿರೀಸಾವೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಮಧ್ಯಾಹ್ನ ಊಟಕ್ಕೆಂದು ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ 75ರ ಸರ್ವಿಸ್ ರಸ್ತೆಯಲ್ಲಿ ಎದುರಿನಿಂದ ಬಂದ ಕಾರು ಡಿಕ್ಕಿಯಾಗಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಎಡವಿಬಿದ್ದು ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹಾಸನ:** ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿ ದಿಢೀರನೆ ಎಡವಿಬಿದ್ದು ಮೃತ ಪಟ್ಟಿರುವ ಘಟನೆ ನಗರದ ಹಾಲುವಾಗಿಲು ರಸ್ತೆಯಲ್ಲಿ ಮಂಗಳವಾರ ಬೆಳಿಗ್ಗ ನಡೆದಿದೆ.

ಗುಡ್ಡೇಗೌಡನಕೊಪ್ಪಲು ನಿವಾಸಿ ಪ್ರಕಾಶ್ (50) ಮೃತರು. ಮದ್ಯವ್ಯಸನಿಯಾಗಿದ್ದ ಪ್ರಕಾಶ್ ಮಂಗಳವಾರ ಬೆಳಿಗ್ಗೆ 7ರ ಸಮಯದಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಆಯತಪ್ಪಿ ರಸ್ತೆಬದಿ ಎಡವಿ ಬಿದ್ದಿದ್ದಾರೆ. ಬಿದ್ದ ರಭಸಕ್ಕೆ ಎದೆ ಭಾಗಕ್ಕೆ ತೀವ್ರ ಏಟಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ, ಪುತ್ರಿ ಹಾಗು ಮಗ ಇದ್ದಾನೆ. ಸ್ಥಳಕ್ಕೆ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು.

# ಕೊಂಚ ಬಿಡುವು ನೀಡಿದ ವರುಣ

» ಮೊದಲನೇ ಪುಟದಿಂದ


ಫಸಲನ್ನು ಕಣದಲ್ಲಿ ಒಣ ಹಾಕಿದ್ದು ನಿರಂತರ ಮಳೆಯಿಂದ ನೀರಿನಲ್ಲಿ ಹರಿದು ಹೋಗುವಂತಾಗಿದೆ. ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

**ಮೋಡ ಮುಸುಕಿದ ವಾತಾವರಣ**

ಮಂಗಳವಾರ ಪೂರ್ತಿದಿನ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿ ಚಳಿಯ ಅನುಭವ ನೀಡಿತು. ಸ್ವಲ್ಪವೂ ಬಿಸಿಲು ಕಾಣದ್ದರಿಂದ ಜನರು ಮನೆಯಿಂದ ಹೊರಬರಲು ಹಿಂದೇಟು ಹಾಕಿದರು.

**ಕೊಚ್ಚಿ ಹೋದ ಸೇತುವೆ: ಶಾಸಕ ಭೇಟಿ**

ಭಾರೀ ಮಳೆಯಿಂದ ಪಾಳ್ಯ ಸಿಂಗೊಂಡನಹಳ್ಳಿ ಗ್ರಾಮ ಮಧ್ಯೆ ಹರಿಯುವ ಚಕ್ರತೀರ್ಥ ನದಿಯ ಕಿರು ಸೇತುವೆ ಕೊಚ್ಚಿ ಹೋಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ಪಾಳ್ಯ, ಅರಳುಕೊಪ್ಪಲು, ಸಿಂಗೊಂಡನ ಹಳ್ಳಿ, ಹಾಚಗೊಂಡಹಳ್ಳಿ, ಮಲ್ಲೇನಹಳ್ಳಿ, ಅಬ್ಬನ ಮತ್ತು ಚಿನ್ನಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಇದ್ದ ಕಿರು ಸೇತುವೆಯು ಸೋಮವಾರ ಸಂಜೆ ಸುರಿದ ಮಳೆಗೆ ಕೊಚ್ಚಿ ಹೋಗಿದೆ. ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ಮಕ್ಕಳು ಶಾಲೆಗೆ ಹೋಗಲು ಹತ್ತಾರು ಕಿ.ಮೀ. ಸುತ್ತಬೇಕಿದೆ. ರಸ್ತೆ ಸಂಪರ್ಕ ಕಡಿತಗೊಂಡಿರುವ ಮಾಹಿತಿ ತಿಳಿದ ಶಾಸಕ ಸಿಮೆಂಟ್ ಮಂಜು ಅವರು ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಕಿರು ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಂತರ ಮಾತಾನಾಡಿದ ಶಾಸಕರು, ಪ್ರಸಕ್ತ ವರ್ಷದಲ್ಲಿ ಮಲೆ ನಾಡು ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಕ್ಷೇತ್ರದ ರಸ್ತೆ, ಸೇತುವೆಗಳು ಕೊಚ್ಚಿ ಹೋಗಿ ಸಾಕಷ್ಟು ಹಾನಿಯಾಗಿದೆ. ಸರ್ಕಾರ ಕೂಡಲೇ ಹಾನಿಯಾಗಿರುವ ಮಲೆನಾಡು ಪ್ರದೇಶಕ್ಕೆ ವಿಶೇಷ ಅನು ದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ನದಿ ಪಾತ್ರ ದಲ್ಲಿರುವ ಕಾಲುವೆಗಳು ಹೂಳು ತುಂಬಿಕೊಂಡು ನೀರು ಚಾನಲ್ ಮೂಲಕ ಸರಾಗವಾಗಿ ಹರಿಯದೆ ಪೋಲಾಗುತ್ತಿದೆ. ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬೆಳೆ ನಾಶವಾಗಿದೆ. ಸರ್ಕಾರ ಕೂಡಲೇ ನಾಲೆಗಳ ದುರಸ್ತಿಗೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು.

**ಜೆಸಿಬಿ ನೆರವಿನಿಂದ ಕಸಕಡ್ಡಿ ತೆರವು**

ಉಪ ನದಿಗಳಿಂದ ಹರಿಯುವ ನದಿಗೆ ನಿರ್ಮಿಸಿರುವ ಕಿರು ಸೇತುವೆಯ ಪೈಪ್ ಗಳಲ್ಲಿ ಮರದ ಕೊಂಬೆ, ಕಸ ಕಡ್ಡಿ ಶೇಖರಣೆಯಾಗಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದಿರುವುದನ್ನು ಅರಿತ ಶಾಸಕ ಸಿಮೆಂಟ್ ಮಂಜು ಅವರು ತಕ್ಷಣ ಜೆಸಿಬಿ ಕರೆಸಿಕೊಂಡು ಪೈಪ್‌ನಲ್ಲಿ ಶೇಖರಣೆಯಾಗಿದ್ದ ಮರದ ದಿಂಬಿ ಹಾಗು ತ್ಯಾಜ್ಯವನ್ನು ಸ್ವಚ್ಛಗೊಳಿಸಿ ನೀರು ಹರಿಯುವ ವ್ಯವಸ್ಥೆ ಮಾಡಿದರು.

# ಧರ್ಮ ಪಾಲನೆಯಿಂದ ಮನು ಕುಲಕ್ಕೆ ಮುಕ್ತಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಧರ್ಮದ ಹಾದಿಯಲ್ಲಿ ನಡೆಯದೆ ಮನು ಕುಲವು ಮುಕ್ತಿ ಪಡೆಯಲು ಸಾಧ್ಯವಿಲ್ಲವೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀ ಕ್ಷೇತ್ರ ಕುಂದೂರು ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಅಮಾವಾಸೆ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಹೋಮ, ಹವನ ಹಾಗು ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಮಾತನಾಡಿ, ಧರ್ಮ ಕಾರ್ಯಗಳಿಂದ ಬದುಕಿಗೆ ಮುಕ್ತಿ ಲಭಿಸಲಿದೆ ಎಂದರು.

ಭಗವಂತನ ಅನುಗ್ರಹವಿಲ್ಲದೆ ಭೂಮಿಯ ಮೇಲೆ ಒಂದು ಹುಲ್ಲು ಕಡ್ಡಿಯು ಅಲುಗಾಡಲು ಸಾಧ್ಯವಿಲ್ಲ. ಆಧುನಿಕವಾಗಿ ಜಗತ್ತು ಎಷ್ಟೇ ಮುಂದುವರಿದರು ಸಹ ಧಾರ್ಮಿಕ ಭಾವನೆಗೆ ಧಕ್ಕೆಯಾಗಿಲ್ಲ. ಯಾಕೆಂದರೆ ಆಧುನಿಕ ವ್ಯವಸ್ಥೆಯು ಧರ್ಮದ ತಳಹದಿಯ ಮೇಲೆಯೇ ನಿಂತಿದೆಯೆಂದರು.



ಒಳ್ಳೆಯ ಮನಸ್ಸಿನಿಂದ ದೇವರನ್ನು ಆರಾಧಿಸಿದರೆ ಯಾವ ಸಂಕಷ್ಟದ ಸಮಯದಲ್ಲೂ ಸಹ ನಮ್ಮನ್ನು ಕೈ ಬಿಡುವುದಿಲ್ಲ. ಧರ್ಮ ಕಾರ್ಯದಲ್ಲಿ ತೊಡಗಿದರೆ ಬದುಕಿನಲ್ಲಿ ಶಾಂತಿ, ನೆಮ್ಮದಿ ಹಾಗು ಮುಕ್ತಿ ಸಿಗಲಿದೆಯೆಂದರು.

ಅಮಾವಾಸೆ ಪೂಜೆಯ ಹಿನ್ನೆಲೆ ದೇಗುಲಕ್ಕೆ ಹೂವಿನ ಚಪ್ಪರ ಹಾಕಲಾಗಿದ್ದು ತಳಿರು ತೋರಣ ಗಳಿಂದ ಸಿಂಗರಿಸಲಾಗಿತ್ತು. ಅಧಿದೇವತೆ ಶ್ರೀ ಮೇಳಿಯಮ್ಮ ದೇವಿಗೆ ವಿಶೇಷ ಅಲಂಕಾರ ಜರಗಿದ್ದು ಶ್ರೀ ಶಂಭುನಾಥ ಸ್ವಾಮೀಜಿಯವರು ಮುತ್ತಿನ ಆರತಿ ಬೆಳಗಿಸಿದರು. ನಂತರ ಹೋಮ, ಹವನ ಹಾಗು ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

## ಮಹಿಳೆ ಕಳೆದುಕೊಂಡಿದ್ದ ಮಾಂಗಲ್ಯ ಸರ ಮರಳಿಸಿದ ಭಕ್ತ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದೇವಿ ದರ್ಶನಕ್ಕೆ ಮೈಸೂರಿನಿಂದ ಬಂದಿದ್ದ ಮಹಿಳೆಯೊಬ್ಬರು ತಮ್ಮ ಮಾಂಗಲ್ಯ ಸರ ಕಳೆದುಕೊಂಡಿದ್ದರು. ಆ ಸರವನ್ನು ಭಕ್ತರೊಬ್ಬರಿಗೆ ಸಿಕ್ಕಿದ್ದು, ಅದನ್ನು ಸ್ಕೌಟ್ ಆ್ಯಂಡ್ ಗೈಡ್ ವಿದ್ಯಾರ್ಥಿಗಳ ನೆರವಿನಿಂದ ದೇವಸ್ಥಾನದ ಅಧಿಕಾರಿಗಳ ಮೂಲಕ ಮಹಿಳೆಗೆ ತಲುಪಿಸಿ ಭಕ್ತರೊಬ್ಬರು ಪ್ರಾಮಾಣಿಕತೆ ಮೆರೆದಿದ್ದಾರೆ.

ಸೋಮವಾರ ಹಾಸನಾಂಬ ದೇವಿ ದರ್ಶನಕ್ಕೆ ಬಂದಿದ್ದ ಮೈಸೂರು ಎಎಸ್‌ಪಿ ಮಲ್ಲಿಕ್ ಅವರ ಪತ್ನಿ ಗೀತಾ ಅವರು ಸರತಿ ಸಾಲಿನಲ್ಲಿ ಬರುವಾಗ ಚಿನ್ನದ ಮಾಂಗಲ್ಯ ಸರ ಕಳಚಿ ಬಿದ್ದಿತ್ತು. ಇದೇ ವೇಳೆ ಸರತಿ ಸಾಲಿನಲ್ಲಿ ಬರುತ್ತಿದ್ದ ಭಕ್ತನಿಗೆ ಸಿಕ್ಕಿದ್ದು, ಅದನ್ನು ಸ್ಕೌಟ್ ಆ್ಯಂಡ್ ಗೈಡ್ಸ್ ಸೇವಕರ ಮೂಲಕ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ತಲುಪಿಸಿದ್ದಾರೆ.

ಸರ ಸಿಕ್ಕಿರುವ ಬಗ್ಗೆ ಮೈಕ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಘೋಷಣೆ ಕೇಳಿ ಬಂದ ಮಹಿಳೆ, ಕಳೆದುಹೋದ ಸರದ ನಿಖರವಾದ ಗುರುತನ್ನು ವಿವರವಾಗಿ ವಿವರಿಸಿದ್ದಾರೆ. ಅವರ ಹೇಳಿಕೆ ಪ್ರಕಾರ ದೇವಸ್ಥಾನದ ಮುಂಭಾಗದಲ್ಲಿ ಚಿನ್ನದ ಸರವನ್ನು ಮಹಿಳೆಗೆ ಮರಳಿಸಲಾಯಿತು. ಈ ಸಂದರ್ಭದಲ್ಲಿ ಸರವನ್ನು ಪಡೆದ ನಂತರ ಎಚ್ಚರದಿಂದ ಇರುವಂತೆ ಹೇಳಿದ್ದಾರೆ. ಈ ಸರ ಅಂದಾಜು 6 ಲಕ್ಷರೂ. ಮೌಲ್ಯದ್ದಾಗಿದ್ದು, ಕಳೆದುಹೋದ ಆಭರಣವನ್ನು ಪ್ರಾಮಾಣಿಕವಾಗಿ ಮರಳಿಸಿದ ಭಕ್ತರ ನಡೆಯನ್ನು ಶ್ಲಾಘನೆ ಮಾಡಲಾಗಿತು.

# ಹಾಸನಾಂಬ ಕಾರಿಡಾರ್ ಮಾಡಿ ದರ್ಶನ ಸರಳಿಕರಿಸಿ

## ನಂಜಾವಧೂತ ಸ್ವಾಮೀಜಿ ಸಲಹೆ | ಮುಖ್ಯಪ್ರವೇಶ ದ್ವಾರದಲ್ಲಿ ತಡೆದಿದ್ದಕ್ಕೆ ಅಸಮಾಧಾನ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನ ವ್ಯವಸ್ಥೆ ಸರಳೀಕರಣಗೊಳಿಸಲು ಹಾಸನಾಂಬ ಕಾರಿಡಾರ್ ಮಾಡಿ ದೇವಾಲಯನ್ನು ಅಭಿವೃದ್ಧಿ ಪಡಿಸುವುದು ಸೂಕ್ತ ಎಂದು ನಂಜಾವಧೂತ ಸ್ವಾಮೀಜಿ ಅವರು ಹೇಳಿದರು.



ಮಂಗಳವಾರ ಹಾಸನಾಂಬ ದರ್ಶನಕ್ಕೆ ಮುಖ್ಯಪ್ರವೇಶ ದ್ವಾರದ ಮೂಲಕ ಆಗಮಿ ಸಲು ಅವಕಾಶ ನೀಡದಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಉಜ್ಜಯಿನಿ, ಕಾಶಿ ಯಂತೆ ಹಾಸನಾಂಬ ಕಾರಿಡಾರ್ ಮಾಡಲು ಸರ್ಕಾರ ನೂರು ಕೋಟಿ ಅನು ದಾನ ಬಿಡುಗಡೆ ಮಾಡಿ ವ್ಯವಸ್ಥೆ ಕಲ್ಪಿಸಲಿ. ವರ್ಷಕ್ಕೆ ಒಮ್ಮೆ ಲಕ್ಷಾಂತರ ಜನರು ಬರುವುದರಿಂದ ಜನಸಂದಣಿ ಉಂಟಾಗು ತ್ತದೆ. ಜಿಲ್ಲಾಧಿಕಾರಿ 10-15 ದಿನದಿಂದ ಎಲ್ಲಾ ಕೆಲಸ ಬಿಟ್ಟು ಒಬ್ಬ ಗುಮಾಸ್ತರ ರೀತಿ ಅಲ್ಲಿ ಕುಳಿತಿದ್ದಾರೆ. ಆದರೂ ಪರಿಸ್ಥಿತಿ ನಿಭಾಯಿಸಲು ಆಗುತ್ತಿಲ್ಲ ಎಂದರು.

ನಾನು ಬಂದು ಒಂದೂವರೆ ಗಂಟೆ ಕಾಯಬೇಕಾಯಿತು. ಹಿಂದಿನ ದಿನ ಸಚಿವರನ್ನು ಕೇಳಿ ಅವರ ಅನುಮತಿ ಪಡೆದು, ಜಿಲ್ಲಾಧಿಕಾರಿ ಬಳಿ ನಾಲ್ಕೈದು ಬಾರಿ ಮಾತನಾಡಿ ಅವರ ಅನುಮತಿ ಪಡೆದು, ಗೇಟ್‌ನಲ್ಲಿ ಒಂದೂವರೆ ಗಂಟೆ ನಿಂತರೂ ಕೊನೆಗೆ ಗೇಟ್ ತೆಗೆಯಲ್ಲ ಅಂದ ಮೇಲೆ ನಾನು ವಾಪಾಸ್ ಹೋಗಿದ್ದೆ. ಸಚಿವ ಕೃಷ್ಣ ಬೈರೇಗೌಡ ಅವರು ಕರೆ ಮಾಡಿ ನೀವು ದರ್ಶನ ಮಾಡಿಕೊಂಡು ಹೋಗಬೇಕೆಂದು ಕಳುಹಿಸಿದರು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ದರ್ಶನ ವ್ಯವಸ್ಥೆ ಕಲ್ಪಿಸ ಬೇಕು. ದೇವರು ಎಲ್ಲರಿಗೂ ಒಂದಯೇ, ಭಗವಂತನನ್ನು ಎಲ್ಲಿ ನೋಡಿದರೂ ಕಾಣುತ್ತದೆ. ಸಿಂಗಲ್ ವಿಂಡೋ ವ್ಯವಸ್ಥೆಯಲ್ಲಿ ದರ್ಶನ ಮಾಡಿದರೆ ಉತ್ತಮ. ಧರ್ಮಕ್ಕೂ ಬೆಲೆ ಇಲ್ಲ, ದರ್ಶನಕ್ಕೂ ಬೆಲೆ ಇಲ್ಲ ಎನ್ನುವ ರೀತಿಯಲ್ಲಿ ಆಗಬಾರದು. ಈ ಬಾರಿ ಕೃಷ್ಣ ಬೈರೇಗೌಡ ಅವರ ಮುಖಂಡತ್ವ ದಲ್ಲಿ ಚೆನ್ನಾಗಿ ಆಗಿದೆ. ನಮಗೆ ಇವತ್ತು ತೊಂದರೆ ಆಗಿದೆ. ಆದರೆ ಕಳೆದ 9-10 ದಿನಗಳಿಂದ ಯಾವುದೇ ತೊಂದರೆ ಇಲ್ಲದೆ ಭಕ್ತರಿಗೆ ದರ್ಶನ ಆಗಿದೆ. ಕಳೆದ ಬಾರಿ ಕಾಲ್ತುಳಿತ ಆಗಿತ್ತು, ಈ ಬಾರಿ ಯಾವುದೇ ಗೊಂದಲ ಆಗದ ರೀತಿ ಮಾಡಿದ್ದಾರೆ ಎಂದರು.

ಎಲ್ಲವನ್ನೂ ದುಡ್ಡಿನಿಂದಲೇ ನೋಡ ಬಾರದು. ಗೋಲ್ಡನ್ ಟಿಕೆಟ್, ಸಾವಿರ ಟಿಕೆಟ್, ಅದಕ್ಕೊಂದು ಗೇಟ್, ಇದಕ್ಕೊಂದು ಗೇಟ್, ಸುಮ್ಮನೆ ನಿಂತುಕೊಂಡರೆ ಆಚೆ ಕಳುಹಿಸು ವಂತಹದ್ದು ಸರಿಯಲ್ಲ. ಇದೆಲ್ಲ ಸರಳೀಕರಣವಾಗಬೇಕು. ದೇವರು ಎಲ್ಲರಿಗೂ ತಲುಪುವಂತೆ, ಮುಟ್ಟುವಂತೆ ಇರಬೇಕು. ಹಾಸನಾಂಬ ದೇವಿ ಒಂದು ಪವಾಡ, ನಮ್ಮ ಪರಂಪರೆ ಯಾವ ರೀತಿ ಗಟ್ಟಿಯಾಗಿ ಉಳಿದಿದೆ ಎಂಬುದಕ್ಕೆ ಇದನ್ನು ನೋಡಿದರೆ ಗೊತ್ತಾಗುತ್ತೆ. ಕಣಕಣದಲ್ಲೂ ಭಗ ವಂತನನ್ನು ನೋಡುವ ನೆಲದಲ್ಲಿ ಹುಟ್ಟಿ ಬೆಳೆದಂತವರು, ಎಲ್ಲೆಲ್ಲೂ ದೇವರನ್ನು ಕಾಣುತ್ತೇವೆ. ಇದೆಲ್ಲ ನಮ್ಮ ನೆಲದ ಶಕ್ತಿ, ಆ ಪರಂಪರೆಯನ್ನ ನಾವೆಲ್ಲರೂ ಉಳಿಸಿಕೊಂಡು ಹೋಗಬೇಕು. ಸರ್ಕಾರಗಳು ಆ ಕೆಲಸ ಮಾಡುತ್ತಿವೆ ಶ್ಲಾಘನೀಯವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ವರುಣಾರ್ಭಟಕ್ಕೆ ನೆಲ ಕಚ್ಚಿದ ಬೆಳೆ: ಪರಿಹಾರಕ್ಕೆ ಆಗ್ರಹ




• ಪ್ರಜೋದಯ ವರದಿ

**ಹಾಸನ:** ಕಳೆದ ಮೂರ್‍ನಾಲ್ಕು ದಿನಗಳಿಂದ ಜಿಲ್ಲಾದ್ಯಂತ ವ್ಯಾಪಕ ಮಳೆ ಸುರಿಯುತ್ತಿದ್ದು ಬೆಳೆ ನಾಶದಿಂದ ನಷ್ಟಕ್ಕೀಡಾಗಿರುವ ರೈತರಿಗೆ ಶೀಘ್ರ ಪರಿಹಾರ ಘೋಷಿಸಬೇಕೆಂದು ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಬಿ.ಎಸ್.ಸೋಮಶೇಖರ್ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಮಲೆನಾಡು ಮಾತ್ರ ವಲ್ಲದೆ ಬಯಲು ಸೀಮೆ ಪ್ರದೇಶ ವಾದ ಚನ್ನರಾಯಪಟ್ಟಣ, ಅರಸೀಕೆರೆ ತಾಲ್ಲೂಕಿನಲ್ಲೂ ವ್ಯಾಪಕ ಮಳೆ ಸುರಿ ದಿದೆ. ಜೋಳದ ಬೆಳೆ ಸಂಪೂರ್ಣ ನೆಲಕಚ್ಚಿ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಕಲೇಶಪುರ ಭಾಗದಲ್ಲಿ ಕಾಡಾನೆ ಹಾವಳಿ ಮಾತ್ರವಲ್ಲದೆ ಮಳೆಯಿಂದ ಕಾಫಿ, ಮೆಣಸು, ಏಲಕ್ಕಿ ಬೆಳೆ ನಾಮಾವಶೇಷವಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಕ್ಷಣವೇ ಕಾರ್ಯ ಪ್ರವೃತ್ತ ರಾಗಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಆಗ್ರಹಿಸಿದರು.

ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಿಂದ ಸಂಪರ್ಕ ರಸ್ತೆಗಳು ಕುಸಿದಿವೆ. ವಿದ್ಯುತ್ ಕಂಬಗಳು ಧರೆಗುರುಳಿದ ಕತ್ತಲು ಆವರಿಸಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಸಮಸ್ಯೆಗೆ ಪರಿಹಾರ ಕಲ್ಪಿಸುವತ್ತ ಗಮನಹರಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಎಸ್.ಆರ್.ವರದೇಗೌಡ, ಉಪಾಧ್ಯಕ್ಷ ವಾಜಿದ್ ಬೇಗ್, ಶರತ್, ನವೀನ್ ಗೌಡ ಇದ್ದರು.

## ಹಾಸನಾಂಬ ಮಹೋತ್ಸವ ಯಶಸ್ವಿ: ಜಿಲ್ಲಾಡಳಿತಕ್ಕೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರಾ ಮಹೋತ್ಸವ ಯಶಸ್ವಿ ಗೊಳಿಸಿದ ಜಿಲ್ಲಾಡಳಿತದ ಎಲ್ಲಾ ಅಧಿಕಾರಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಬಿರಾರ್ಥಿಗಳಿಗೆ ಅಭಿನಂದನೆ ಸಮಾರಂಭವನ್ನು ಶೀಘ್ರದಲ್ಲೇ ಹಮ್ಮಿಕೊಳ್ಳಲಾಗು ವುದೆಂದು ಕಾಂಗ್ರೆಸ್ ಮುಖಂಡ ಬಿ.ಕೆ. ಮಂಜುನಾಥ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಮಹೋತ್ಸವಕ್ಕೆ ವರ್ಷದಿಂದ ವರ್ಷಕ್ಕೆ ಬರುತ್ತಿರುವ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ಜನ ದಟ್ಟಣೆ ಹೆಚ್ಚಾಗಿ ಸಮಸ್ಯೆಯಾಗಿತ್ತು. ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕೈಗೊಂಡ ನಿಯಮಗಳು ಯಾವುದೇ ಗೊಂದ ಲವಿಲ್ಲದಂತೆ ಜಾತ್ರೆ ನೆರವೇರಿದೆ. ಪಕ್ಷ ಬೇಧ ಮರೆತು ಎಲ್ಲರೂ ಈ ಬಾರಿಯ ವ್ಯವಸ್ಥೆಯನ್ನು ಮೆಚ್ಚಿದ್ದಾರೆ. ನಗರದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ಅಭಿನಂದನಾ ಸಮಾರಂಭ ನಡೆಯಲಿದೆಯೆಂದರು.




ಹಾಸನಾಂಬ ಜಾತ್ರಾ ಮಹೋತ್ಸವ ವೇಳೆ ಸಣ್ಣಪುಟ್ಟ ಸಮಸ್ಯೆಯಾಗಿದೆ. ದೇವಾಲಯ ಸುತ್ತಲಿನ ನಿವಾಸಿಗಳಿಗೆ ತೊಂದರೆಯಾಗಿದೆ. ಮನೆಯಿಂದ ಹೊರಬರಲು ಪರದಾಡುವ ಪರಿಸ್ಥಿತಿ ಮುಂದುವರಿದಿದೆ. ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗು ಜಿಲ್ಲಾಧಿಕಾರಿ ಗಮನಕ್ಕೆ ತರಲಾಗುವುದು. ಮುಂದಿನ ವರ್ಷದ ವೇಳೆಗೆ ದೇವಾಲಯ ಸುತ್ತಲಿನ ಜಾಗ ಸ್ವಾಧೀನ ಪಡಿಸಿಕೊಂಡು ಮಾಲೀಕರಿಗೆ ಪರಿಹಾರ ಸಿಗುವಂತಾಗ ಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮುಬಷಿರ್ ಅಹಮದ್, ಗೋಪಾಲೇಗೌಡ, ಬಾಳ್ಳುಗೋಪಾಲ್ ಇದ್ದರು.




**ಶ್ರೀ ಹಾಸನಾಂಬ ದೇವಿ ಪೂಜಾ, ದರ್ಶನ ವಿವರ - 2025**

| ದಿನಾಂಕ ಮತ್ತು ವಾರ | ದೇವಿಯ ದರ್ಶನ ಸಮಯ | ನೈವೇದ್ಯ ಸಮಯ |
|---|---|---|
| 09-10-2025, ಗುರುವಾರ | ಮಧ್ಯಾಹ್ನ 12.00 ರಿಂದ ಬಾಗಿಲು ತೆಗೆಯಲಾಗುವುದು ಸಾರ್ವಜನಿಕ ದರ್ಶನ ಇರುವುದಿಲ್ಲ. | ಸಾರ್ವಜನಿಕ ದರ್ಶನ ಇರುವುದಿಲ್ಲ. |
| 10-10-2025, ಶುಕ್ರವಾರ | ಬೆಳಗ್ಗೆ 6.00 ರಿಂದ ಸಂಜೆ 7.00 | ಸಂಜೆ 7.00 ರಿಂದ ಸಾರ್ವಜನಿಕ ದರ್ಶನ ಇರುವುದಿಲ್ಲ. |
| 11-10-2025, ಶನಿವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 12-10-2025, ಭಾನುವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 13-10-2025, ಸೋಮವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 14-10-2025, ಮಂಗಳವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 15-10-2025, ಬುಧವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 16-10-2025, ಗುರುವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 2.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 2.00 ರಿಂದ 5.00 |
| 17-10-2025, ಶುಕ್ರವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 18-10-2025, ಶನಿವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 19-10-2025, ಭಾನುವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 2.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 2.00 ರಿಂದ 5.00 |
| 20-10-2025, ಸೋಮವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 3.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 3.00 ರಿಂದ 5.00 |
| 21-10-2025, ಮಂಗಳವಾರ | ಬೆಳಗ್ಗೆ 5.00 ರಿಂದ ಮಧ್ಯಾಹ್ನ 2.00 ಮಧ್ಯಾಹ್ನ 3.30 ರಿಂದ ಬೆಳಗಿನ ಜಾವ 2.00 | ಮಧ್ಯಾಹ್ನ 2.00 ರಿಂದ 3.30 ಬೆಳಗಿನ ಜಾವ 2.00 ರಿಂದ 5.00 |
| 22-10-2025, ಬುಧವಾರ | ಬೆಳಗ್ಗೆ 5.00 ರಿಂದ ಸಂಜೆ 7.00 ರಾತ್ರಿ 1.00 ರಿಂದ ಬೆಳಗ್ಗೆ 7.00 | ಸಂಜೆ 7.00 ರಾತ್ರಿ 1.00 |
| 23-10-2025, ಗುರುವಾರ | ಮಧ್ಯಾಹ್ನ 12.00 ಗಂಟೆಗೆ ಬಾಗಿಲು ಮುಚ್ಚಲಾಗುವುದು | ಸಾರ್ವಜನಿಕ ದರ್ಶನ ಇರುವುದಿಲ್ಲ. |


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019